ನಾಚಿಕೆ ಪಡಬೇಡ ಮನದೊಳು ಯೋಚಿಸಿ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page no. 90.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 314.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 415.
4. **Note:** The wordings (given without highlights) are as per the book in Ref. 1 above. The wordings in the book in Ref. 2 & Ref. 3 are matching fully and are marked in yellow highlights. The singer has followed Ref. 2 & Ref. 3.

ರಾಗ ಸುರುಟಿ ಆದಿ ತಾಳ	ರಾಗ ಕೇದಾರ ಗೌಳ ಆದಿ ತಾಳ
ನಾಚಿಕೆಗೊಳಬೇಡ ಮನದಲಿ	ನಾಚಿಕೆಪಡಬೇಡ ಮನದೊಳು
ಯೋಚಿಸಿ ಕೆಡಬೇಡ ‖ ಪ ‖	ಯೋಚಿಸಿ ಕೆಡಬೇಡ
ನೀಚವೇನೊ ನಮ್ಮಚ್ಯುತನೋಲಗ	ನಿಚ್ಚ ನೆನೆಯೊ ನಮ್ಮಚ್ಯುತ ನಾಮವ
ಮೆಚ್ಚಿ ಕೊಟ್ಟಿದೆ ನಿನಗೆ ಹೆಚ್ಚಿನ ಪದವಿಯ ‖ ಅಪ ‖	ಮೆಚ್ಚಿ ಕೊಟ್ಟರೆ ಅಚ್ಯುತ ಪದವೀವ
ಹರಿ ಹರಿ ಎಂದೊದರೊ ಹತ್ತಿದ	ಹರಿ ಹರಿ ಎಂದೊದರೊ ಹತ್ತಿದ
ದುರಿತಗಳಿಗೆ ಬೆದರೊ	ದುರಿತಗಳಿಗೆ ಬೆದರೊ
ನೀರಜಾಕ್ಷ ನಿರ್ಜರ ಪತಿ ಹರಿಯೆಂದು	ವಾರಿಜಾಕ್ಷನ ವೈಕುಂಠ ಪುರವ
ಚೀರಿ ಹಾರಿ ಭೋರಿಡುತಲಿ ಕುಣಿಯೊ ‖ 1 ‖	ಸೇರಿ ಸೇರಿ ನೀ ಕುಣಿ ಕುಣಿದಾಡೊ
ಯಾರ ಗೋಡವೆಯೆನೊ ನರಕದ	ಆರಗೊಡವೆಯೆನೊ ನರಕದ
ದಾರಿ ತಪ್ಪಿಪರೇನೊ	ದಾರಿ ತಪ್ಪಿಸುವರೆ
ಸಾರಿ ಸಾರಿ ಸರ್ವೇಶನ ನಾಮವ	ನೀರಜಾಕ್ಷ ನಮ್ಮ ನಿರ್ಜರ ಪತಿಯಲಿ

ಬೀರಿ ಬೀರಿ ಕೈ ಮುಗಿದು ಕೊಂಡಾಡೊ ‖ 2 ‖	ಸೇರಿ ಸೇರಿಸಿ ಮನ ನಲಿ ನಲಿದಾಡೊ
ಭಕ್ತ ಜನರ ಕೂಡೊ ಭವ ಭಯ	ಭಕ್ತ ಜನರ ಕೂಡೊ ಭವ ಭಯ
ಬತ್ತಿ ಪೋಪುದು ನೋಡೊ	ಬತ್ತಿ ಪೋಪುದು ನೋಡೊ
ಮುಕ್ತಿದಾಯಕ ಶ್ರೀ ಪುರಂದರ ವಿಠಲನ	ಮುಕ್ತಿದಾಯಕ ಶ್ರೀ ಪುರಂದರ ವಿಠಲನ
ಭಕ್ತಿಯಿಂದ ನೀ ಕುಣಿಯುತ ಪಾಡೋ ‖ 3 ‖	ಭಕ್ತಿಯಿಂದ ನೀ ಹಾಡಿ ಕೊಂಡಾಡೊ

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಹೆಚ್ಚಿನ ಪದವಿ – ಮನುಷ್ಯ ಜನ್ಮ; ಅದೇನು ಕೀಳಾದುದಲ್ಲ; ಪರಮಾತ್ಮನ ಅನುಗ್ರಹದಿಂದಲೇ ಬಂದದ್ದು; ಸಾಧನೆಗೆ ಅನುಕೂಲವಾದದ್ದು.

ಅಚ್ಯುತ ಪದ = ಮೋಕ್ಷ

ನಿರ್ಜರು = ದೇವತೆಗಳು

ದುರಿತ = ಪಾಪ, ಕಷ್ಟ, ಅಮಂಗಳ, ಕೇಡು

Classification: Keerthane
Ankita: sri purandara vittala
Location: NA
Category: bhakti, nama smarane, Aartha Bhava, Buddi Maatu
Sub-Category: nachike, achyuta, Krishna, papa, naraka, pati, bhava, mukti
Pravachana: NA
Explanation: NA